**OS No.78/2019**
**PW.1**

<u>ದಿನಾಂಕಃ **16.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ</u> ಪರ ವಕೀಲರಿಂದ

ದಾವಾ ಸ್ವತ್ತು ಬಿ ಷೆಡ್ಯೂಲ್‌ನ ಆರ್.ಟಿ.ಸಿ. ಗಂಗಯ್ಯ ಎಂಬುವವರ ಹೆಸರಿನಲ್ಲಿ ಇರುತ್ತದೆ. ಯಾವ ಆಧಾರದ ಮೇಲೆ ಬರುತ್ತಿದೆ ಎಂದರೆ ಸರ್ಕಾರಿ ಗೋಮಾಳ ಜಾಗವಾಗಿದ್ದು, ನಮ್ಮ ಜಮೀನಿಗೆ ಹೋಗಲು ಮೊದಲಿನಿಂದಲೂ ದಾರಿ ಇದ್ದು, ಅದರ ಆಧಾರದ ಮೇಲೆ ಕೇಳುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾಸ್ವತ್ತು ಬಿ ಷೆಡ್ಯೂಲ್‌ನ ಆಸ್ತಿಗೂ ಹಾಗೂ ಪ್ರತಿವಾದಿಗಳಿಗೂ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಗಳ ವಿರುದ್ಧ ದಾರಿಯನ್ನು ಬಿಟ್ಟುಕೊಡಬೇಕೆಂದು ಕೋರಿರುತ್ತೇನೆ. ದಾವಾಸ್ವತ್ತು ಬಿ ಷೆಡ್ಯೂಲ್ ಗೋಮಾಳ ಜಾಗ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೇ ನಂ. 292 ರಲ್ಲಿ 82 ರ ಗೋಮಾಳದ ಜಾಗದಲ್ಲಿ ಸುಮಾರು 1 ಎಕರೆ ಜಾಗವಿರಬಹುದು ಎಂದು ನುಡಿಯುತ್ತಾರೆ. ದಾವಾಸ್ವತ್ತಿನ ಬಿ ಷೆಡ್ಯೂಲ್‌ನ ಚೆಕ್ಕುಬಂಧಿಯನ್ನು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ದಾವಾಸ್ವತ್ತನ ಎ ಷೆಡ್ಯೂಲ್ ಜಾಗದಲ್ಲಿ ನಾನೇ ಸ್ವಾಧೀನದಲ್ಲಿರುತ್ತೇನೆ. ನನಗೆ ಬೇರೆ ಯಾರೂ ತೊಂದರೆ ಕೊಡುತ್ತಿಲ್ಲ. ದಾವಾಸ್ವತ್ತಿನ ಬಿ ಷೆಡ್ಯೂಲ್‌ನ ಸರ್ವೇ ನಂಬರ್ ಮತ್ತು ವಿಸ್ತೀರ್ಣ ನನಗೆ ಗೊತ್ತಿಲ್ಲ. ಪ್ರಸ್ತುತ ದಾರಿಯನ್ನು ಕೋರಿ ನಾನು ಮಾತ್ರ ದಾವೆಯನ್ನು ಹೂಡಿರುತ್ತೇನೆ. ಓ.ಎಸ್ 171/2011 ಹಾಗೂ ಎಕ್ಸಿಕ್ಯೂಷನ್ 2/2018 ಪ್ರಕರಣಗಳಿಗೂ ಹಾಗೂ ಪ್ರಸ್ತುತ ಪ್ರಕರಣಕ್ಕೂ ಸಂಬಂಧ ಇರುವುದಿಲ್ಲ. ದಾವಾ ಬಿ ಷೆಡ್ಯೂಲ್ ಸ್ವತ್ತಿನಲ್ಲಿ ಖರಾಬು ಇರುವ ಬಗ್ಗೆ ನನಗೆ ಗೊತ್ತಿಲ್ಲ. ದಿಃ 28.01.2019 ರಲ್ಲಿ ಪ್ರತಿವಾದಿಗಳು ಜೆ.ಸಿ.ಬಿ.ಯ ಮೂಲಕ ಜಮೀನನ್ನು ಅಗೆದು ತೊಂದರೆ ಕೊಟ್ಟಿರುತ್ತಾರೆ. ಪ್ರತಿವಾದಿಗಳು ಎಲ್ಲರೂ ಸೇರಿ ತೊಂದರೆ ಮಾಡಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪೋಲೀಸ್ ಠಾಣೆಯಲ್ಲಿ ದೂರು ಕೊಡಲು ಹೋದರೆ ಪೋಲೀಸರು ದೂರು ದಾಖಲಿಸಿಕೊಂಡಿರುವುದಿಲ್ಲ, ಕಾರಣ ಪ್ರತಿವಾದಿಯ ಮನೆಯಲ್ಲಿ ರಾಜಕೀಯ ವ್ಯಕ್ತಿಗಳು ಇರುವ ಕಾರಣದಿಂದ ಪೋಲೀಸರು ದೂರು ದಾಖಲಿಸಿಕೊಂಡಿರುವುದಿಲ್ಲ. ಆ ರೀತಿ ಯಾವುದೇ ಗಲಾಟೆ ಆಗದ ಕಾರಣ ಪೋಲೀಸರು ದೂರನ್ನು ದಾಖಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ವ್ಯವಸಾಯದ ಕುಟುಂಬದವರು ಎಂದರೆ ಸರಿ. ಪ್ಯಾರಾ ನಂ.8 ರಲ್ಲಿ ಹೇಳಿದಂತೆ ಪ್ರತಿವಾದಿಗಳು ಜೆ.ಸಿ.ಬಿ ಮೂಲಕ ಜಮೀನನ್ನು ಅಗೆದಿರುತ್ತಾರೆ. ದಾರಿ ಇದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ.

ನಾನು 2007 ರಲ್ಲಿ ಜಮೀನನ್ನು ಖರೀದಿಸಿರುತ್ತೇನೆ. ಪ್ರತಿವಾದಿಗಳು ಜಾಗ ಖರೀದಿಸುವ ವೇಳೆಯಲ್ಲಿ ನಮಗೆ ಅಲ್ಲಿ ಓಡಾಡಲು ದಾರಿ ಇಲ್ಲವೆಂದು ತಿಳಿಸಿರುತ್ತಾರೆಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಜಾಗವನ್ನು ನಾವು ಮೊದಲು ಬೇರೆಯವರಿಗೆ ಮಾರಿದ್ದು, ನಂತರ ಪುನಃ ನಾವೇ ಖರೀದಿ ಮಾಡಿರುತ್ತೇವೆ ಹಾಗಾಗಿ ಸದರಿ ಜಾಗದಲ್ಲಿ ಓಡಾಡಲು ದಾರಿ ಇದೆ ಎಂದು ಗೊತ್ತಿರುತ್ತದೆ ಎಂದು ನುಡಿಯುತ್ತಾರೆ. ದಾರಿಯ ವಿಚಾರವಾಗಿ ಸರ್ವೇ ಅಧಿಕಾರಿಗಳಿಗೆ, ತಹಶೀಲ್ದಾರ್‌ರವರಿಗೆ, ಎ.ಸಿ ಹಾಗೂ ಡಿ.ಸಿ ರವರಿಗೆ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಆ ರೀತಿ ಯಾವುದೇ ದಾರಿ ಇಲ್ಲದ ಕಾರಣ ಯಾವುದೇ ಅರ್ಜಿಯನ್ನು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ತಯಾರಿಸಲು ನಾನೇ ಮಾಹಿತಿ ನೀಡಿರುತ್ತೇನೆ. ಕ್ರಯಪತ್ರದಲ್ಲಿ ಪೂರ್ವಕ್ಕೆ ದಾರಿ ಇದೆ ಎಂದು ನಾವು ಓಡಾಡುತ್ತಿದ್ದರ ಆಧಾರದ ಮೇಲೆ ಬರೆದಿರುತ್ತೇನೆ. ನನ್ನ ಕ್ರಯಪತ್ರದಲ್ಲಿ ಓಡಾಡಲು ದಾರಿ ಇದೆ ಎಂದು ತೋರಿಸಿ ಅದರ ಆಧಾರದ ಮೇಲೆ ಸದರಿ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಕ್ರಯಪತ್ರವನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾರಿ ಇದೆ ಎಂದು ತೋರಿಸಲು ಸರ್ವೇ ದಾಖಲೆಯನ್ನು ಹಾಗೂ ನಕ್ಷೆಯನ್ನು ನ್ಯಾಯಾಲಯಕ್ಕೆ ಕೊಡಲು ಯಾವುದೇ ತೊಂದರೆ ಇಲ್ಲ. ಹಿಂದಿನ ಮಾಲೀಕರ ಕ್ರಯಪತ್ರದಲ್ಲಿ ಯಾವುದೇ ರೀತಿಯ ದಾರಿ ಇದೆ ಎಂದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯಪತ್ರವನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**